**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂ:ಕೃಇ/ಆತ್ಮ/ರಾ.ಮ.ರೈ.ಸ.ಸ./ಸಭೆ/2019–20

ಕೃಷಿ ನಿರ್ದೇಶನಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು.
ದಿನಾಂಕ : 23–03–2020

**ಇವರಿಗೆ,**

ಶ್ರೀ/ಶ್ರೀಮತಿ. ------------------,
ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ ಸದಸ್ಯರು ಹಾಗೂ
--------------------
--------------------

**ಸನ್ಮಾನ್ಯರೇ,**

**ವಿಷಯ:–** **ದಿ:13–03–2020 ರಂದು ನಡೆದ ಆತ್ಮ ಯೋಜನೆಯ ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ ಸಭೆಯ ನಡವಳಿಗಳ ಕುರಿತು.**

*~*~*~*~*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿ:13–03–2020 ರಂದು ಬೆಂಗಳೂರಿನ ಕೃಷಿ ಇಲಾಖೆಯ 'ಕೋಲ್‌ಮನ್' ಸಭಾಂಗಣದಲ್ಲಿ ನಡೆದ ಆತ್ಮ ಯೋಜನೆಯ ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವುದನ್ನು ತಮ್ಮ ಆದ್ಯಗಮನಕ್ಕೆ ತರಬಯಸುತ್ತೇನೆ.

ದಯವಿಟ್ಟು ನಡವಳಿಗಳು ಸ್ವೀಕೃತವಾಗಿರುವ ಬಗ್ಗೆ ಹಾಗೂ ನಡವಳಿಗಳನ್ವಯ ಸಂಬಂಧಿಸಿದವರು ಕ್ರಮವಹಿಸುವಂತೆ ಮತ್ತು ಈ ಬಗ್ಗೆ ತಮ್ಮ ಅನಿಸಿಕೆ, ಅಭಿಪ್ರಾಯಗಳಿದ್ದಲ್ಲಿ ನಮ್ಮ ಕಛೇರಿಗೆ ಕಳುಹಿಸಬಹುದೆಂದು ತಿಳಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಅಪರ ಕೃಷಿ ನಿರ್ದೇಶಕರು (ಮಾ.ಸಂ.ಅ.) ಮತ್ತು**
**ಸದಸ್ಯ ಕಾರ್ಯದರ್ಶಿ–ರಾ.ಮ.ರೈ.ಸ.ಸ. ಹಾಗೂ**
**ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ**

**ಪ್ರತಿಯನ್ನು ಆದರ ಪೂರ್ವಕವಾಗಿ ಸಲ್ಲಿಸಿದೆ:–**

1. ಅಧ್ಯಕ್ಷರು, ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ ಹಾಗೂ ಕೃಷಿ ಆಯುಕ್ತರು, ಕೇಂದ್ರ ಕಛೇರಿ, ಬೆಂಗಳೂರು.
2. ನಿರ್ದೇಶಕರು, ಸಮೇತಿ (ಉ / ದ), ಕೃಷಿ ವಿಶ್ವ ವಿದ್ಯಾನಿಲಯ, ಧಾರವಾಡ / ಬೆಂಗಳೂರು.
3. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು / ಯೋಜನಾ ನಿರ್ದೇಶಕರು (ಆತ್ಮ), ಕೃಷಿ ಇಲಾಖೆ (ಎಲ್ಲಾ 29 ಜಿಲ್ಲೆಗಳು) ಇವರ ಮಾಹಿತಿಗಾಗಿ ಕಳುಹಿಸಿದೆ.
4. ಸಂಯೋಜಕರು, ಆತ್ಮ ಘಟಕ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ.

## *ದಿನಾಂಕ : 13-03-2020 ರಂದು ನಡೆದ ಆತ್ಮ ಯೋಜನೆಯ*
## *"ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ" ಸಭೆಯ ನಡವಳಿಗಳು*

ದಿನಾಂಕ : 13-03-2020 ರಂದು ಮಧ್ಯಾಹ್ನ 12.00 ಗಂಟೆಗೆ "ಆತ್ಮ ಯೋಜನೆಯ ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ ಸಭೆ"ಯನ್ನು 'ಸಮೃದ್ಧಿ' ಸಭಾಂಗಣದಲ್ಲಿ ನಡೆಸಲಾಯಿತು.

ಸಭೆಗೆ ಹಾಜರಾದ ಸದಸ್ಯರ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಪ್ರಾರಂಭದಲ್ಲಿ ಶ್ರೀ. ಎನ್. ಬಸವರಾಜ್, ರಾಜ್ಯ ಆತ್ಮ ಸಂಯೋಜಕರು ಇವರು, "ರಾಜ್ಯ ರೈತ ಸಲಹಾ" ಸಮಿತಿಯ ಅಧ್ಯಕ್ಷರು ಮತ್ತು ಕೃಷಿ ಆಯುಕ್ತರನ್ನು ಅಧ್ಯಕ್ಷತೆ ವಹಿಸಿ ಕಾರ್ಯಕಲಾಪಗಳನ್ನು ನಡೆಸಿಕೊಡುವಂತೆ ಕೋರುತ್ತಾ, ರಾಜ್ಯ ರೈತ ಸಲಹಾ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಎಂ.ಎಸ್.ದಿವಾಕರ, ಅಪರ ಕೃಷಿ ನಿರ್ದೇಶಕರು(ಮಾ.ಸಂ.ಅ)ರವರನ್ನು, ಸಭೆಗೆ ಹಾಜರಿದ್ದ ಧಾರವಾಡ ಕೃಷಿ ವಿಶ್ವವಿದ್ಯಾಲಯ ವಿಸ್ತರಣಾ ನಿರ್ದೇಶಕರಾದ ಡಾ॥ರಮೇಶ್‌ಬಾಬುರವರನ್ನು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವಿಸ್ತರಣಾ ನಿರ್ದೇಶಕರಾದ ಡಾ॥ ಶಿವಲಿಂಗೇಗೌಡ್ರುರವರನ್ನು, ಪಶುವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ ವಿಸ್ತರಣಾ ನಿರ್ದೇಶಕರ ಪರವಾಗಿ ಡಾ॥ನಾಗರಾಜ್‌ರವರನ್ನು ಹಾಗೂ ಸಮೇತಿ ಸಂಯೋಜಕರುಗಳನ್ನು ಹಾಗೂ ಇತರೆ ಅಧಿಕಾರಿಗಳನ್ನು ಮತ್ತು ರಾಜ್ಯ ರೈತ ಸಲಹಾ ಸಮಿತಿಯ ಸದಸ್ಯರನ್ನು ಸ್ವಾಗತಿಸಿದರು.

ಪ್ರಾರಂಭದಲ್ಲಿ ಆತ್ಮ ಯೋಜನೆಯ ವತಿಯಿಂದ ಸಲಹಾ ಸಮಿತಿಯ 22 ರೈತ ಸದಸ್ಯರು ಮತ್ತು ನಾಲ್ವರು ಅಧಿಕಾರಿಗಳ ನೇತೃತ್ವದಲ್ಲಿ ಗುಜರಾತ್ ಪ್ರವಾಸವನ್ನು ಕಳೆದ ಜನವರಿ-2020ರಲ್ಲಿ ಕೈಗೊಂಡಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು. ತದನಂತರ ಸಮಿತಿಯ ಅಧ್ಯಕ್ಷರು ಗುಜರಾತ್ ರಾಜ್ಯದಲ್ಲಿನ ಬೆಳೆವಾರು ಉತ್ಪಾದನಾ ಮಟ್ಟವನ್ನು ಪರಿಗಣಿಸಿದಾಗ ನಮ್ಮ ರಾಜ್ಯದಲ್ಲಿನ ಉತ್ಪಾದನಾ ಮಟ್ಟವು ಸಾಕಷ್ಟು ಕಡಿಮೆ ಅಂತರವಿರುವುದರ ಕುರಿತು ಸಲಹಾ ಸಮಿತಿ ಸದಸ್ಯರು ತಮ್ಮ ಅಮೂಲ್ಯ ಸಲಹೆಗಳನ್ನು ಉತ್ಪಾದನೆ/ಇಳುವರಿಯನ್ನು ಹೆಚ್ಚುವರಿ ಮಾಡಬಹುದು ಎಂಬುದರ ಕುರಿತು ಲಿಖಿತವಾಗಿ ಇಲಾಖೆಗೆ ನೀಡುವಂತೆ ಕೋರಿದರು. ಒಟ್ಟಾರೆಯಾಗಿ ಸದಸ್ಯರು ಇಂದಿನ ಸಭೆಯಲ್ಲಿ ತಾಂತ್ರಿಕತೆಯ ಕುರಿತು ಹೊಸ ಅನ್ವೇಷಣೆಗಳಿಗೆ ಸಲಹೆ ನೀಡಿದರೆ ಆ ಸಲಹೆಗಳು ಸ್ವಲ್ಪ ಮಟ್ಟಿಗೆ ರೈತರ ವರಮಾನ ದ್ವಿಗುಣಗೊಳಿಸುವ ಕೇಂದ್ರದ ಉದ್ದೇಶಕ್ಕೆ ದಾರಿದೀಪವಾಗುವಲ್ಲಿ ಸಹಕಾರಿಯಾಗುತ್ತದೆ ಎಂದರು.

ತದನಂತರ ಸಭಾಧ್ಯಕ್ಷರ ಅನುಮತಿಯ ಮೇರೆಗೆ ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

**ವಿಷಯ-1 :- ದಿ:25.10.2019ರಂದು ನಡೆದ ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ ಸಭೆಯ ನಿರ್ಣಯಗಳಿಗೆ ಕೈಗೊಂಡ ಕ್ರಮಗಳು:-**

ದಿ:25-10-2019 ರಂದು ನಡೆದ ರಾಜ್ಯ ಮಟ್ಟದ ರೈತರ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ವಿಷಯವಾರು ಸೂಚಿಸಿರುವಂತೆ ಆತ್ಮ ಯೋಜನೆಯಲ್ಲಿ ಕೈಗೊಳ್ಳಲಾದ ಕ್ರಮಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

**ವಿಷಯ:-2:- ಆತ್ಮ ಯೋಜನೆಯಡಿಯಲ್ಲಿ ವಿಸ್ತರಣಾ ಪ್ರಸರಣೆಗೆ ಕೈಗೊಂಡ ಚಟುವಟಿಕೆಗಳ ಮಂಡನೆ.**

ಕ್ರಿಯಾ ಯೋಜನೆ 2019-20ರನ್ವಯ ಕೈಗೊಳ್ಳಲಾದ ಪ್ರಸರಣಾ ಕಾರ್ಯಚಟುವಟಿಕೆಗಳಲ್ಲಿ ಶೇ.100ಕ್ಕಿಂತ ಭೌತಿಕ ಪ್ರಗತಿಯಾಗಿರುವುದನ್ನು ಸಭೆಯಲ್ಲಿ ಮಂಡಿಸಲಾಯಿತು. ಸಭಾ ಅಧ್ಯಕ್ಷರು ಅಂತರ್ ರಾಜ್ಯ ಪ್ರವಾಸಕ್ಕೂ ಕೂಡ ಇನ್ನು ಮುಂದೆ ಹೆಚ್ಚು ಒತ್ತು ಕೊಡುವಂತೆ ಸಲಹೆ ಮಾಡಿದರು. ಈ ಸಂದರ್ಭದಲ್ಲಿ ಗುಜರಾತ್ ರಾಜ್ಯಕ್ಕಿಂತಲೂ ರಾಜಸ್ಥಾನ ರಾಜ್ಯದಲ್ಲಿ ಹೆಚ್ಚು ನೀರಿನ ಸಂರಕ್ಷಣೆ ಕುರಿತು ಕಾರ್ಯತಂತ್ರಗಳನ್ನು ತಿಳಿದುಕೊಳ್ಳಬಹುದಾಗಿದ್ದು, ಈ ಕುರಿತು ರಾಜ್ಯ ರೈತ ಸಲಹಾ ಸಮಿತಿ ಸದಸ್ಯರಿಗೆ ಮುಂಬರುವ ಸಾಲಿನಲ್ಲಿ ರಾಜಸ್ಥಾನ ರಾಜ್ಯದಲ್ಲಿ ಏರ್ಪಡಿಸುವಂತೆ ಸಲಹೆ ಮಾಡಿದರು.

**ವಿಷಯ:-3:- ಸಮೇತಿ ಕೇಂದ್ರಗಳ ತರಬೇತಿ ಕಾರ್ಯಕ್ರಮಗಳ ಪ್ರಗತಿ ಮಂಡನೆ:-**

ಸಂಯೋಜಕರಾದ ಡಾ॥ಪಿಳ್ಳೇಗೌಡ್ರು, ಸಮೇತಿ ಬೆಂಗಳೂರು ರವರು ವಿಸ್ತರಣಾ ಕಾರ್ಯಕರ್ತರಿಗೆ

2019-20ರಲ್ಲಿ ಅನುಷ್ಠಾನ ಮಾಡಿರುವ ಆತ್ಮ ಹಾಗೂ ಕೇಂದ್ರ ಸರ್ಕಾರ, MANAGE ಸಹಯೋಗದೊಂದಿಗೆ ನಿರ್ವಹಿಸಿದ ತರಬೇತಿ ಕಾರ್ಯಕ್ರಮಗಳನ್ನು ಹಾಗೂ ರಾಜ್ಯ ಸಲಹಾ ಸಮಿತಿಯ ರೈತ ಸದಸ್ಯರನ್ನು ಗುಜರಾತ್ ರಾಜ್ಯಕ್ಕೆ ಅಂತರ್‌ರಾಜ್ಯ ಪ್ರವಾಸವನ್ನು ನಿರ್ವಹಿಸಿರುವುದನ್ನು ತಿಳಿಸಿದರು. ಒಟ್ಟಾರೆಯಾಗಿ ಶೇ.97%ರಷ್ಟು ಆರ್ಥಿಕ ಸಾಧನೆಯಾಗಿರುವ ಮಾಹಿತಿಯನ್ನು ಮಂಡಿಸಿದರು.

ತದನಂತರ ಡಾ॥ಗೋಪಾಲ್, ಸಮೇತಿ ಸಂಯೋಜಕರು, ಧಾರವಾಡ ಇವರು 2019-20ರಲ್ಲಿ ವಿಶೇಷವಾಗಿ ಉಪ ವಿಭಾಗವಾರು ಎಂಟು ಸ್ಥಳಗಳಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ 11 ಸ್ಥಳಗಳಲ್ಲಿ ಸಮನ್ವಯ ಹಾಗೂ ಎಫ್.ಪಿ.ಓ ಕುರಿತು ವಿಸ್ತರಣಾ ಕಾರ್ಯಕರ್ತರಿಗೆ ಕಾರ್ಯಗಾರಗಳ ಮೂಲಕ

ತಿಳಿಸಿಕೊಟ್ಟಿರುವುದನ್ನು PPT ಮೂಲಕ ಮಂಡಿಸಿದರು. ಮೂರು ಅಂತರರಾಜ್ಯ ಪ್ರವಾಸವನ್ನು 141 ವಿಸ್ತರಣಾ ಸಿಬ್ಬಂದಿಗೆ ಕೈಗೊಂಡಿರುವುದಾಗಿ, ತರಬೇತಿ ಕಾರ್ಯಕ್ರಮಗಳಲ್ಲಿ ಶೇ.100%ರಷ್ಟು ಪ್ರಗತಿಯಾಗಿರುವ ಮಾಹಿತಿಯನ್ನು ಮಂಡಿಸಿದರು. ಆತ್ಮ ಯೋಜನೆಯಲ್ಲಿ 2016-17 & 2017-18ರ ಸಾಲಿನಲ್ಲಿ ರಾಜ್ಯಮಟ್ಟದಲ್ಲಿ ವಿವಿಧ ಪ್ರಕಾರಗಳ ಪ್ರಶಸ್ತಿ ವಿಜೇತ ರೈತ ಸದಸ್ಯರ ಯಶೋಗಾಥೆಗಳ ಕಿರುಹೊತ್ತಿಗೆ ಪ್ರಕಟಣೆಗಳನ್ನು ಮುದ್ರಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

**ವಿಷಯ-4 :- ಆತ್ಮ ಯೋಜನೆಯ 2020-21 ರ ಕ್ರಿಯಾ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸದಸ್ಯರಿಂದ ನವೀನ ರೀತಿಯ ಸಲಹೆ ಸೂಚನೆಗಳನ್ನು ಪಡೆಯುವ ಕುರಿತು ಚರ್ಚೆ.**

**ಸದಸ್ಯರು ನೀಡಲಾದ ಅಭಿಪ್ರಾಯ ಸಲಹೆಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.**

**ವಿಷಯ-5:- ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬರುವ ಇತರೆ ವಿಷಯಗಳು**

ಸಲಹಾ ಸಮಿತಿಯ ಸದಸ್ಯರೆಲ್ಲರ ಪರವಾಗಿ ಶ್ರೀಮತಿ ಮಹಾದೇವಿ ಗೋಕಾಕ(ವಿಜಯಪುರ ಜಿಲ್ಲೆ) ಇವರು ರಾಜ್ಯ ಸಲಹಾ ಸಮಿತಿಯು ಕೇವಲ ಎರಡು ವರ್ಷಕ್ಕೆ ಸೀಮಿತವಾಗಿರುವುದರಿಂದ ಇತರೇ ಚುನಾಯಿತ ಸಂಸ್ಥೆಗಳ ಪ್ರತಿನಿಧಿಗಳಿಗೆ ನಿಗದಿಪಡಿಸಿರುವಂತೆ ಕನಿಷ್ಠ ಐದು ಇಲ್ಲವೇ ಮೂರು ವರ್ಷಗಳ ಕಾಲಾವಧಿಯನ್ನು ನಿಗದಿಪಡಿಸುವಂತೆ ಕೋರಿದರು. ಸಭಾಧ್ಯಕ್ಷರು ಕೇಂದ್ರ ಸರ್ಕಾರವು ನಿರೂಪಿಸುವ ಆತ್ಮ ಮಾರ್ಗಸ್ರೂಚಿಯನ್ವಯ ಚಟುವಟಿಕೆಗಳನ್ನು ಅನುಷ್ಠಾನ ಮಾಡುತ್ತಿದ್ದು ಈ ಕುರಿತು ತಾಲ್ಲೂಕಾ, ಜಿಲ್ಲಾ ಹಾಗೂ ರಾಜ್ಯ ರೈತ ಸಲಹಾ ಸಮಿತಿಗಳು ಕಾಲಾವಧಿಯನ್ನು ಮುಂಬರುವ ಆತ್ಮ ಮಾರ್ಗಸೂಚಿ ಪರಿಷ್ಕರಣೆಗೆ ಅವಕಾಶಗಳಿದ್ದಲ್ಲಿ ಆ ಬಗ್ಗೆ ಕ್ರಮವಹಿಸಲಾಗುವುದೆಂದು ತಿಳಿಸಿದರು.

ಶ್ರೀಮತಿ ಶೇಖಮ್ಮ, ಕೊಪ್ಪಳ ಇವರು ಸಾವಯವ ಕೃಷಿಯಲ್ಲಿ ಸಾಧಿಸಿರುವ ಹಲವಾರು ಜೈವಿಕ ಪೀಡೆನಾಶಕಗಳನ್ನು ಸಭಾಧ್ಯಕ್ಷರು ಸಾಯವಯಕೃಷಿಯಲ್ಲಿ ಸಾಧಿಸಿರುವ ಸಾಧನೆಗಳ ಕುರಿತು ಕೇಂದ್ರ ಪುರಸ್ಕೃತ **ಹಲ್ದಾರ ಪ್ರಶಸ್ತಿ**ಗಾಗಿ ಮುಂದಿನ ಸಾಲಿನಲ್ಲಿ ನಿಯೋಜಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮವಹಿಸುವಂತೆ ರಾಜ್ಯ ಸಂಯೋಜಕರಿಗೆ ಸಲಹೆ ಮಾಡಿದರು.

ಈ ಸಂದರ್ಭದಲ್ಲಿ ಸದಸ್ಯರೆಲ್ಲರೂ ತಮ್ಮ ಕಾಲಾವಧಿಯಲ್ಲಿ ಉತ್ತಮ ಬಾಂಧವ್ಯವನ್ನು ಮತ್ತು ಸಹಕಾರವನ್ನು ನೀಡಿದ ಸಭಾ ಅಧ್ಯಕ್ಷರಾದ ಕೃಷಿ ಆಯುಕ್ತರನ್ನು, ಕೃಷಿ ನಿರ್ದೇಶಕರು, ಸದಸ್ಯ ಕಾರ್ಯದರ್ಶಿಯವರಾದ ಅಪರ ಕೃಷಿ ನಿರ್ದೇಶಕರು(ಮಾ.ಸಂ.ಅ)ರವರನ್ನು, ಸಮೇತಿ ಅಧಿಕಾರಿಗಳಿಗೆ ಹಾಗೂ ಆತ್ಮ ಸಿಬ್ಬಂದಿಗೆ ವಂದನೆಗಳನ್ನು ತಿಳಿಸಿದರು.

ಸಭೆಯಲ್ಲಿ ಇನ್ನಿತರ ಯಾವುದೇ ವಿಷಯಗಳು ಚರ್ಚೆಗೆ ಬಾರದಿರುವುದರಿಂದ, ಸಭಾಧ್ಯಕ್ಷರಿಗೂ ಮತ್ತು ಸಭೆಯಲ್ಲಿ ಭಾಗವಹಿಸಿದ ಎಲ್ಲಾ ಸಲಹಾ ಸಮಿತಿಯ ಸದಸ್ಯರಿಗೆ, ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕೃಷಿ ಆಯುಕ್ತರು ಹಾಗೂ** 23/03/20
**ಅಧ್ಯಕ್ಷರು, ರಾ.ರೈ.ಸ.ಸಮಿತಿ(ಆತ್ಮ ಯೋಜನೆ)**
**ಕೃಷಿ ಇಲಾಖೆ, ಬೆಂಗಳೂರು**

**ಇವರಿಗೆ:**

1. ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಅಪರ ಕೃಷಿ ನಿರ್ದೇಶಕರು(ಮಾ.ಸಂ.ಅ) ಹಾಗೂ ಸದಸ್ಯ ಕಾರ್ಯದರ್ಶಿಗಳು, ರಾ.ರೈ.ಸ.ಸಮಿತಿ(ಆತ್ಮ) ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ರಾಜ್ಯ ಮಟ್ಟದ ರೈತ ಸಲಹಾ ಸಮಿತಿ ಸದಸ್ಯರುಗಳು - ಮಾಹಿತಿಗಾಗಿ ಸಲ್ಲಿಸಿದೆ.
4. ನಿರ್ದೇಶಕರು, ಸಮೇತಿ (ಉ/ದ), ಕೃವಿವಿ ಧಾ/ಬೆಂ - ಇವರುಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
5. ವಿಸ್ತರಣಾ ನಿರ್ದೇಶಕರು, ಕೃವಿವಿ ರಾಯಚೂರು/ಕೃ&ತೋ ವಿವಿ ಶಿವಮೊಗ್ಗ/ತೋ ವಿವಿ ಬಾಗಲಕೋಟೆ/ಪಶು & ವೈ ವಿವಿ ಬೀದರ್ ಇವರಿಗಳ ಮಾಹಿತಿಗಾಗಿ.
6. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು(29 ಜಿಲ್ಲೆಗಳು)/ಜಿಲ್ಲಾ ಯೋಜನಾ ನಿರ್ದೇಶಕರು(ಆತ್ಮ)(29 ಜಿಲ್ಲೆಗಳು)/ತಾಲ್ಲೂಕಾ ಸಹಾಯಕ ಕೃಷಿ ನಿರ್ದೇಶಕರು (174 ತಾಲ್ಲೂಕುಗಳು) ಇವರುಗಳಿಗೆ ಸಂಬಂಧಪಟ್ಟ ನಡವಳಿಗಳಲ್ಲಿ ಸೂಚಿಸಿರುವಂತೆ ಅಗತ್ಯ ಕ್ರಮಕೈಗೊಂಡು ವರದಿ ಸಲ್ಲಿಸಲು ಸೂಚಿಸಿದೆ.
7. ಸಂಬಂಧಪಟ್ಟ ಅಧಿಕಾರಿಗಳು, ಆತ್ಮ ಘಟಕ, ಬೆಂಗಳೂರು.

**ಪ್ರತಿಯನ್ನು:- ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಆದರ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.**

## ಅನುಬಂಧ-1

**ದಿನಾಂಕ:13-03-2020 ರಂದು ನಡೆದ ಆತ್ಮ ಯೋಜನೆಯ "ರಾಜ್ಯ ಮಟ್ಟದ ರೈತರ ಸಲಹಾ ಸಮಿತಿಯ ಸಭೆ" ಯಲ್ಲಿ ಭಾಗವಹಿಸಿದ ಸದಸ್ಯರ ಹಾಗೂ ಅಧಿಕಾರಿಗಳ ಹಾಜರಾತಿ ವಿವರ.**

| ಕ್ರ ಸಂ. | ಸದಸ್ಯರ ಹೆಸರು | ಹುದ್ದೆ / ಜಿಲ್ಲೆ | ದೂರವಾಣಿ ಸಂಖ್ಯೆ |
|---|---|---|---|
| 1. | ಶ್ರೀ ಬ್ರಿಜೇಶ್ ಕುಮಾರ್ ದೀಕ್ಷಿತ್ | ಕೃಷಿ ಆಯುಕ್ತರು ಮತ್ತು ರಾಜ್ಯ ನೋಡಲ್ ಅಧಿಕಾರಿ(ಆತ್ಮ)- ಅಧ್ಯಕ್ಷರು | |
| 2. | ಶ್ರೀ. ದಿವಾಕರ್ | ಸದಸ್ಯ ಕಾರ್ಯದರ್ಶಿ ಮತ್ತು ಅಪರ ಕೃಷಿ ನಿರ್ದೇಶಕರು (ಮಾ.ಸಂ.ಅ.) | 8277929821 |
| 3. | ಶ್ರೀ ಶಿವಲಿಂಗೇಗೌಡ್ರು | ನಿರ್ದೇಶಕರು ಸಮೇತಿ/ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ಬೆಂಗಳೂರು - ಸದಸ್ಯರು | 9449866904 |
| 4. | ಶ್ರೀ ರಮೇಶ್‌ಬಾಬು | ನಿರ್ದೇಶಕರು ಸಮೇತಿ/ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ. ಧಾರವಾಡ - ಸದಸ್ಯರು | 9448651525 |
| 5. | ಶ್ರೀ ಪರಸಪ್ಪ ನಿಂಗಪ್ಪ ಹುನ್ನೂರ | ಬಾಗಲಕೋಟೆ-ಸದಸ್ಯರು | 9986903201 |
| 6. | ಶ್ರೀಮತಿ ಹೇಮಲತಾ ಎಂ.ಸಿ | ಮಂಡ್ಯ-ಸದಸ್ಯರು | 9480043257 |
| 7. | ಶ್ರೀ. ವಿಠ್ಠಲ ಪಾಂಚಾಳ | ಬೀದರ್-ಸದಸ್ಯರು | 8088170787 |
| 8. | ಶ್ರೀ.ಮುರುಗೇಶಪ್ಪ | ದಾವಣಗೆರೆ-ಸದಸ್ಯರು | 9886924269 |
| 9. | ಶ್ರೀಮತಿ ಯಶೋಧ ಬಿ.ಜಿ. | ಹಾಸನ-ಸದಸ್ಯರು | 8861415246 |
| 10. | ಶ್ರೀ.ಈಶ್ವರ ಬ ಮಾಳಣ್ಣವರ | ಧಾರವಾಡ-ಸದಸ್ಯರು | 9945129404 |
| 11. | ಶ್ರೀ. ಸುಶೀಲಕುಮಾರ | ಕಲ್ಬುರ್ಗಿ-ಸದಸ್ಯರು | 8970195555 |
| 12. | ಶ್ರೀಮತಿ.ಶೇಖಮ್ಮ | ಕೊಪ್ಪಳ-ಸದಸ್ಯರು | 9480496582 |
| 13. | ಶ್ರೀ.ಎಂ.ಧರ್ಮಲಿಂಗಂ | ಕೋಲಾರ-ಸದಸ್ಯರು | 9448456763 |
| 14. | ಶ್ರೀ. ಸುದರ್ಶನ ರಾವ್ ಸಿಂಧೆ | ಮೈಸೂರು-ಸದಸ್ಯರು | 9481530498 |
| 15 | ಶ್ರೀ ಎಂ.ಓ.ವೆಂಕಟೇಶನಾಯ್ಕ | ಶಿವಮೊಗ್ಗ-ಸದಸ್ಯರು | 9972716052 |
| 16. | ಶ್ರೀ.ರಾಜೇಶ್ ಪೂಜಾರಿ | ಉಡುಪಿ-ಸದಸ್ಯರು | 9945370037 |
| 17. | ಶ್ರೀ. ರಮೇಶ ನಾರಾಯಣ ಹೆಗಡೆ | ಉತ್ತರ ಕನ್ನಡ-ಸದಸ್ಯರು | 9483759913 |
| 18. | ಶ್ರೀ ಹನುಮೇಶಗೌಡ ಪಾಟೀಲ್ | ಯಾದಗಿರಿ-ಸದಸ್ಯರು | 9480272791 |
| 19. | ಶ್ರೀ. ವೆಂಕಟೇಶ್ | ಚಾಮರಾಜನಗರ-ಸದಸ್ಯರು | 9686464802 |
| 20. | ಬಸವರಾಜ.ಚಂದ್ರಪ್ಪ ನಾವ್ಹಿ | ಗದಗ-ಸದಸ್ಯರು | 7259968715 |
| 21. | ಶ್ರೀ ಎಂ.ಟಿ.ಓಬಣ್ಣ | ಚಿತ್ರದುರ್ಗ-ಸದಸ್ಯರು | 7760093452 |
| 22. | ಶ್ರೀ ದೊಡ್ಡಯ್ಯ | ತುಮಕೂರು-ಸದಸ್ಯರು | 9742008178 |
| 23. | ಶ್ರೀಮತಿ ಗೀತಾ.ಕೆ | ದಕ್ಷಿಣ ಕನ್ನಡ-ಸದಸ್ಯರು | 7892519408 |
| 24. | ಶ್ರೀಮತಿ ಮಹಾದೇವಿ ಗೋಕಾಕ | ವಿಜಯಾಪುರ-ಸದಸ್ಯರು | 9902103816 |
| 25. | ಶ್ರೀ ವೀರಣ್ಣ ಯ ಕಳಸಣ್ಣವರ | ಬೆಳಗಾವಿ-ಸದಸ್ಯರು | 9845294334 |
| 26. | ಶ್ರೀ ಚನ್ನಪ್ಪ ಬಾಳಿಕಾಯಿ | ಹಾವೇರಿ-ಸದಸ್ಯರು | 7259718082 |
| 27. | ಡಾ।ನಾಗರಾಜ್ | ಪಶುವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್, ವಿಸ್ತರಣಾ ನಿರ್ದೇಶಕರ ಪರವಾಗಿ | |
| 28. | ಡಾ। ಪಿಳ್ಳೇಗೌಡ್ರು | ಸಂಯೋಜಕರು, ಸಮೇತಿ (ದ), ಕೃವಿವಿ, ಬೆಂ. | 9741109113 |
| 29. | ಡಾ। ಎಮ್. ಗೋಪಾಲ್ | ಸಂಯೋಜಕರು, ಸಮೇತಿ (ಉ), ಕೃವಿವಿ, ಬೆಂ. | 9449483187 |
| 30. | ಡಾ। ಎನ್ ಬಸವರಾಜ | ರಾಜ್ಯ ಸಂಯೋಜಕರು(ಆತ್ಮ) | 8277929875 |
| 31. | ಶ್ರೀಮತಿ ಸವಿತಾ ಆರ್.ಎಮ್ | ಲಿಂಗತ್ವ ಸಂಯೋಜಕರು(ಆತ್ಮ) | 9480225745 |
| 32. | ಡಾ। ಜಿ.ಆರ್ ಓಂಕಾರಪ್ಪ | ಉಪ ನಿರ್ದೇಶಕರು, ಸಮೇತಿ(ದ), ಕೃವಿವಿ, ಬೆಂ. | 9448729367 |
| 33. | ಡಾ। ಜೆ.ಶಿವಣ್ಣ | ಉಪ ನಿರ್ದೇಶಕರು, ಸಮೇತಿ(ದ), ಕೃವಿವಿ, ಬೆಂ. | 7483331832 |
| 34. | ಶ್ರೀ ನರಸರಾಜ್ | ಉಪ ನಿರ್ದೇಶಕರು, ಸಮೇತಿ(ದ), ಕೃವಿವಿ, ಬೆಂ. | 9113059116 |
| 35. | ಶ್ರೀಮತಿ ವೀಣಾ ಪಾಚಪೂರ್ | ತಾಂತ್ರಿಕ ಸಹಾಯಕರು-ಆತ್ಮ ಘಟಕ | 9449353982 |
| 36. | ಶ್ರೀಮತಿ ದೀಪಿಕಾ ಆರ್.ಬಿ | ಕಂಪುಯೂಟರ್ ಪ್ರೋಗ್ರಾಮರ್ | 9538994640 |

## ಅನುಬಂಧ-2

**ದಿನಾಂಕ:13-03-2020 ರಂದು ನಡೆದ ಆತ್ಮ ಯೋಜನೆಯ "ರಾಜ್ಯ ಮಟ್ಟದ ರೈತರ ಸಲಹಾ ಸಮಿತಿಯ ಸಭೆ"ಯಲ್ಲಿ ಭಾಗವಹಿಸಿದ ರೈತ ಸದಸ್ಯರ ಅನಿಸಿಕೆಗಳು.**

| ಕ್ರ ಸಂ. | ರೈತರ ಹೆಸರು | ಅನಿಸಿಕೆಗಳು |
|---|---|---|
| 1. | ಶ್ರೀಮತಿ ಶೇಖಮ್ಮ (ಕೊಪ್ಪಳ ಜಿಲ್ಲೆ) | ಜೈವಿಕ ಪೀಡೆನಾಶಕಗಳ ಕುರಿತು ಹೆಚ್ಚಿನ ಮಾಹಿತಿ ನೀಡುತ್ತಾ ಈ ಪೀಡೆನಾಶಕಗಳಿಂದ ಉಳಿತಾಯ ಹಾಗೂ ಆದಾಯ ಬಂದಿರುವುದಾಗಿ ಉತ್ಪನ್ನಗಳ ಗುಣಮಟ್ಟವು ಕೂಡ ಹೆಚ್ಚಿನ ಶೇಖರಣ ಸಮಯ ಹಾಗೂ ಉತ್ಕೃಷ್ಟ ಪೋಷಕಾಂಶಗಳನ್ನು ಹೊಂದಿರುವುದಾಗಿ ತಿಳಿಸಿದರು.<br>ಕಷಾಯ ತಯಾರಿಸುವ ವಿಧಾನ: ½ ಕೆಜಿ ಬೆಳ್ಳುಳ್ಳಿ, ½ ಕೆ.ಜಿ ಕೆಂಪು ಮೆಣಸಿನಕಾಯಿ, 3ಕೆ.ಜಿ ಬೇವಿನ ತೊಪ್ಪಲು, 3 ಕೆ.ಜಿ ಎಕ್ಕೆ ತೊಪ್ಪಲು, 3 ಕೆ.ಜಿ.ಲೆಕ್ಕಿ ತೊಪ್ಪಲು ತೊಪ್ಪಲುಗಳನ್ನು ಚೆನ್ನಾಗಿ ಅರಿದು ನೀರಿನಲ್ಲಿ ಬೆರೆಸಿ ಕುದಿಸಬೇಕು ಇದನ್ನು ಸೋಸಿ ಕಷಾಯವನ್ನು ಬೇರ್ಪಡಿಸುವುದು. ನಂತರ ಬೆಳ್ಳುಳ್ಳಿ, ಕೆಂಪು ಮೆಣಸಿನಕಾಯಿ ರುಬ್ಬಿಕೊಂಡು ಬಟ್ಟೆಯಲ್ಲಿ ಕಟ್ಟಿ ನೀರಿನಲ್ಲಿ 12 ಗಂಟೆಗಳ ಕಾಲ ನೆನೆಸಿಡಬೇಕು. ಇದನ್ನು ಹಿಂಡಿ ದೊಡ್ಡ ಡ್ರಮ್‌ನಲ್ಲಿ ಎರಡನ್ನು ಮಿಶ್ರಣಗೊಳಿಸಬೇಕು. ಇದಕ್ಕೆ 2 ಲೀಟರ್ ಹಸುವಿನ ಗಂಜಲ ಹಾಗೂ ೪ ಲೀಟರ್ ಹುಳಿ ಮಜ್ಜಿಗೆಯನ್ನು ಮಿಶ್ರಣ ಮಾಡಿ 10 ಲೀಟರ್ ನೀರನ್ನು ಬೆರೆಸಿ ಚೆನ್ನಾಗಿ ಕಲಕಿಸಬೇಕು. ಸದರಿ ಕಷಾಯವು ಈಗ ಸಿಂಪರಣೆಗೆ ತಯಾರಾಗಿರುವುದು. ಈ ಕಷಾಯವನ್ನು 15 ದಿನಗಳ ಕಾಲ ಶೇಖರಿಸಬಹುದಾಗಿ ತಿಳಿಸಿದರು. |
| 2. | ಶ್ರೀಮತಿ ಎಮ್.ಸಿ.ಹೇಮಲತಾ (ಮಂಡ್ಯ ಜಿಲ್ಲೆ) | ಕೃಷಿಹೊಂಡ ಫಲಾನುಭವಿಗಳಿಗೆ ಎರೆಹುಳು ಗೊಬ್ಬರ ತಯಾರಿಕೆಯನ್ನು ಕಡ್ಡಾಯಗೊಳಿಸುವಂತೆ ಇದರಿಂದ ರೈತರಿಗೆ ಎರೆಹುಳು ಗೊಬ್ಬರದ ಮಹತ್ವ ಹಾಗೂ ಭೂ-ಫಲವತ್ತತೆಗೆ ಹೆಚ್ಚಿನ ಪ್ರಾಶಸ್ತ್ಯಸಿಗುವಲ್ಲಿ ಸಹಕಾರಿಯಾಗುವುದೆಂದು ತಿಳಿಸಿದರು. |
| 3. | ಶ್ರೀ ವಿಠ್ಠಲ ಪಾಂಚಾಳ (ಬೀದರ್ ಜಿಲ್ಲೆ) | ಹಾಪ್‌ಕಾಮ್ಸ್ ಮಳಿಗೆಗಳ ಮೂಲಕ ತರಕಾರಿ ಹಾಗೂ ಇತರೆ ರೈತರ ಉತ್ಪನ್ನಗಳನ್ನು ನೇರವಾಗಿ ವಿದ್ಯಾರ್ಥಿ ನಿಲಯಗಳಿಗೆ ಪೂರೈಸಿದಲ್ಲಿ ನಿಖರ ಮಾರುಕಟ್ಟೆಗೆ ದಾರಿಯಾಗುವುದೆಂದು ತಿಳಿಸಿದರು. |
| 4. | ಶ್ರೀಮತಿ ಯಶೋಧ (ಹಾಸನ ಜಿಲ್ಲೆ) | ಹಸುಗಳು ಸತ್ತರೆ ವಿಮಾ ಕಂಪನಿಯಿಂದ ಕೇಲವ ಶೇ.10% ಹಸುವಿಕ ಮೌಲ್ಯಕ್ಕೆ ವಿಮಾ ಹಣವನ್ನು ಮಾತ್ರ ಪಡೆಯುವ ಅವಕಾಶವಿರುತ್ತದೆ. ಈ ಸಹಾಯಧನವನ್ನು ಶೇ.50%ಕ್ಕೆ ಏರಿಸಲು ಕೋರಿದರು. |
| 5. | ಶ್ರೀ ಮುರುಗೇಶಪ್ಪ (ದಾವಣಗೆರೆ ಜಿಲ್ಲೆ) | ರೈತ ಉತ್ಪನ್ನ ಸಂಸ್ಥೆಗಳ ಸಮಸ್ಯೆಗಳಲ್ಲಿ ಬಹು ಮುಖ್ಯವಾಗಿ ಸ್ವಂತ ನಿವೇಶನ ಹೊಂದುವಲ್ಲಿ ಸರ್ಕಾರವೇ ಈ ಕುರಿತು ಸರ್ಕಾರಿ ಅಥವಾ ಹುಲುಗಾವಲು ಇತ್ಯಾದಿ ಜಮೀನುಗಳನ್ನು ಮಂಜೂರು ಮಾಡುವಲ್ಲಿ ಕ್ರಮವಹಿಸುವುದು. ಸರ್ಕಾರವು ಸಾವಯವ ಕೃಷಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿರುವುದರಿಂದ ಸ್ಲರಿ ಪಂಪ್‌ಗೂ ಸಹಾಯಧನ ವಿಸ್ತರಿಸುವಂತೆ, ಕೃಷಿಹೊಂಡಗಳಿಗೆ ಪ್ಲಾಸ್ಟಿಕ್ ಹೊದಿಕೆ ಬದಲು ಕಾಂಕ್ರೀಟ್ ಹಾಸುಗಳನ್ನು ಅಳವಡಿಸುವಂತೆ ಕೋರಿದರು. |
| 6. | ಶ್ರೀ ಈಶ್ವರ ಮಾಳಣ್ಣವರ (ಧಾರವಾಡ ಜಿಲ್ಲೆ) | ಸೋಲಾರ ಬಲೆಗಳಿಗೆ ಸಹಾಯಧನ ಹಾಗೂ ಜಮೀನಿನ ಮೇಲ್ಭಾಗದಲ್ಲಿ ನೀರು ಶೇಖರಣಾ ಹೊಂಡಗಳ ನಿರ್ಮಾಣಕ್ಕೆ ಕೂಡ ಸಹಾಯಧನದ ಸೌಲಭ್ಯ ನೀಡುವಂತೆ ತಿಳಿಸಿದರು. |
| 7. | ಶ್ರೀ ಸುಶೀಲಕುಮಾರ (ಕಲುಬುರ್ಗಿ ಜಿಲ್ಲೆ) | ಟ್ರಾಕ್ಟರ್‌ಗೆ ಹೊಂದಿಕೊಂಡಿರುವ ಬಿಡಿಭಾಗಗಳಿಗೆ ಮತ್ತು ಹೆಚ್ಚಾಗಿ ನೀರು ಹಾಗೂ ಜೀವಾಮೃತ ಸಾಗಾಣಿಕೆಗಾಗಿ ಟ್ಯಾಂಕರ್‌ಗಳಿಗೆ ಸಹಾಯಧನವನ್ನು ವಿಸ್ತರಿಸುವಂತೆ ಕೋರಿದರು. ಕಬ್ಬು ಬೆಳೆಯಲ್ಲಿ ಹನಿ ನೀರಾವರಿ ಅಳವಡಿಕೆಗಾಗಿ ಸಹಾಯಧನದ ಅಗತ್ಯತೆಯನ್ನು ಸಭೆಯ ಗಮನಕ್ಕೆ ತಂದರು. ನಿಯಮಾನುಸಾರ ಜಿಲ್ಲೆಯಲ್ಲಿ ಆತ್ಮ ಸಲಹಾ ಸಮಿತಿಗಳನ್ನು ಏರ್ಪಡಿಸುವಂತೆ ತಿಳಿಸಿದರು. |
| 8. | ಶ್ರೀ ಎಂ.ಧರ್ಮಲಿಂಗಂ (ಕೋಲಾರ ಜಿಲ್ಲೆ) | ತಮ್ಮ ಕ್ಷೇತ್ರದಲ್ಲಿ ಮಳೆನೀರು ಕೊಯ್ಲು ತಂತ್ರಜ್ಞಾನ ಅಳವಡಿಸಿರುವುದನ್ನು ಮಾದರಿ ಅನುಷ್ಠಾನವಾಗಿದ್ದು ಈ ಬಗ್ಗೆ ರೈತ ಸದಸ್ಯರು ಅಳವಡಿಸುವಂತೆ ಮನವಿ ಮಾಡಿದರು. ಹಾಲಿ ನೀಡುತ್ತಿರುವ ಡೀಸೆಲ್ ಪಂಪ್‌ಸೆಟ್‌ನ್ನು ಬಹುಪಯೋಗಿ ಉಪಕರಣವಾಗಿ ಮಾರ್ಪಡಿಸುವಂತೆ ಕೋರಿದರು. ಬಯೋಡೈಜಸ್ಟರ್ ಸಹಾಯಧನ ಸೇರಿದಂತೆ ಜೀವಾಮೃತ ಸಿಂಪಡಿಕೆಗಾಗಿ ಟ್ಯಾಂಕರ್‌ಗೆ ಸಹಾಯಧನ ನೀಡುವಂತೆ ಕೋರಿದರು. ಮುಖ್ಯವಾಗಿ ಹನಿ ನೀರಾವರಿಯನ್ನು ಮರದ ಬೇರುಗಳಿಗೆ ಅಳವಡಿಸುವಲ್ಲಿ ಬಂದಿರುವ ನವೀನ ರೀತಿಯ ಉಪಕರಣಗಳಿಗೂ ಸಹಾಯಧನವನ್ನು ವಿಸ್ತರಿಸುವಂತೆ ತಿಳಿಸಿದರು. |

| | | |
|---|---|---|
| 9. | ಶ್ರೀ ಸುದರ್ಶನ ರಾವ್ ಸಿಂಧೆ (ಮೈಸೂರು ಜಿಲ್ಲೆ) | "ಸಮಗ್ರ ಕೃಷಿ ಪದ್ಧತಿ" ಅಳವಡಿಕೆ ಕುರಿತು ಮಾದರಿ ಪ್ರಾತ್ಯಕ್ಷಿಕೆಗಳನ್ನು ಹೋಬಳಿವಾರು ನಿರ್ವಹಿಸುವುದು. ಅರಣ್ಯ ಸಸಿಗಳನ್ನು & ಹೆಬ್ಬೇವು ಬೆಳೆಸುವಂತೆ ಹಾಗೂ ತಾಡಪತ್ರಗಳನ್ನು ಒದಗಿಸುವಂತೆ ಕೋರಿದರು. |
| 10. | ಶ್ರೀ ಎಂ.ಓ.ವೆಂಕಟೇಶನಾಯ್ಕ (ಶಿವಮೊಗ್ಗ ಜಿಲ್ಲೆ) | ಸದರಿಯವರು ಗುಜರಾತ್ ಪ್ರವಾಸದಿಂದಾದ ತಮ್ಮ ಅನುಭವಗಳನ್ನು ಸವಿಸ್ತಾರವಾಗಿ ಮಂಡಿಸಿದರು. ಮುಖ್ಯವಾಗಿ ಕೃಷಿ ಯಾಂತ್ರೀಕರಣ, ನೀರು ನಿರ್ವಹಣೆ, ಮೌಲ್ಯವರ್ಧನೆ ಇತ್ಯಾದಿ ಜೊತೆಗೆ ಮಹಾತ್ಮಗಾಂಧೀಜಿಯವರ ಆಶ್ರಮ, ಅಮೂಲ್ ಸಂಸ್ಥೆ ಇತ್ಯಾದಿ ಭೇಟಿಗಳು ಸಾಕಷ್ಟು ಉತ್ತೇಜನವನ್ನು ಪಡೆದಿರುವುದಾಗಿ ತಿಳಿಸಿದರು. |
| 11. | ಶ್ರೀ ರಾಜೇಶ್ ಪೂಜಾರಿ (ಉಡುಪಿ ಜಿಲ್ಲೆ) | ಕೃಷಿ ಯಂತ್ರಧಾರೆ ಕೇಂದ್ರಗಳ ಕೆಲಸದ ಸಮಯವನ್ನು ಸರ್ಕಾರಿ ಕಛೇರಿಗಳ ವೇಳೆಯ ಬದಲು ರೈತರಿಗೆ ಹೊಂದುವಂತೆ ಮಾರ್ಪಾಡು ಮಾಡುವಂತೆ ಕೋರಿದರು. ಕೆರೆಗಳಲ್ಲಿರುವ ಕೆರೆಹೂಳು ಕುರಿತು ಕೃಷಿ ಇಲಾಖೆಯು ಅರಣ್ಯ ಇಲಾಖೆಯ ಸಮನ್ವಯದೊಂದಿಗೆ ರೈತರ ಜಮೀನಿನಲ್ಲಿ ಬಳಕೆಗೆ ಬಳಸುವಂತೆ ಕ್ರಮವಹಿಸಲು ತಿಳಿಸಿದರು. |
| 12. | ಶ್ರೀ ರಮೇಶ ನಾರಾಯಣ ಹೆಗಡೆ (ಉತ್ತರಕನ್ನಡ ಜಿಲ್ಲೆ) | ಕ್ಷೇತ್ರ ಮಟ್ಟದಲ್ಲಿ ವಿಸ್ತರಣಾ ಕಾರ್ಯಕರ್ತರ ಅಲಭ್ಯತೆ ಹೆಚ್ಚಾಗಿದ್ದು, ಎಲ್ಲಾ ಕೃಷಿ ಸಂಬಂಧಿತ ಇಲಾಖೆಗಳಲ್ಲಿ ಅನ್ವಯಿಸುವಂತೆ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವಂತೆ ತಿಳಿಸಿದರು. ಕೃಷಿ ಅರಣ್ಯಕ್ಕೆ ಒತ್ತು ನೀಡುವಂತೆ, ಮಳೆಕೊಯ್ಲು ಅಳವಡಿಕೆ ಮಾಡುವ ರೈತರಿಗೆ ಉತ್ತೇಜನ/ಪ್ರೋತ್ಸಾಹ ಧನ, ಗ್ರಾಮಪಂಚಾಯತ್ ಮಟ್ಟದಲ್ಲಿ ಗ್ರಾಮೀಣ ಉಗ್ರಾಣ ನಿರ್ಮಾಣ, ವನ್ಯ ಜೀವಿಗಳ ಸಂರಕ್ಷಣೆ ಇತ್ಯಾದಿ ಬಗ್ಗೆ ಕ್ರಮವಹಿಸುವಂತೆ ಕೋರಿದರು. |
| 13. | ಶ್ರೀ ಹನುಮೇಶಗೌಡ ಪಾಟೀಲ್ (ಯಾದಗಿರಿ ಜಿಲ್ಲೆ) | ಹಸಿರು ಮನೆಗಳ ಮೂಲಕ ಹೂವಿನ ಬೇಸಾಯ ಹೆಚ್ಚು ಲಾಭದಾಯಕವಾಗಿದ್ದು, ಈ ಕುರಿತು ನೀಡುವ ಸಹಾಯಧನವನ್ನು ಪ.ಜಾ/ಪ.ಪಂಕ್ಕೆ ನೀಡುವಂತೆ ಸಾಮಾನ್ಯ ವರ್ಗಕ್ಕೂ ಕೋರಿದರು. |
| 14. | ಶ್ರೀ ವೆಂಕಟೇಶ್ ಬಿನ್ (ಚಾಮರಾಜನಗರ ಜಿಲ್ಲೆ) | ಟ್ರಾಕ್ಟರ್ ಉಪಕರಣಗಳನ್ನು ಸಹಾಯಧನದ ರೂಪದಲ್ಲಿ ವಿತರಿಸುವಂತೆ ಹಾಗೂ ವನ್ಯ ಜೀವಿಗಳ ತೊಂದರೆಗಳನ್ನು ತಪ್ಪಿಸವಲ್ಲಿ ಹತೋಟಿ ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೋರಿದರು. |
| 15. | ಶ್ರೀ ಬಸವರಾಜ.ಚಂದ್ರಪ್ಪ ನಾವ್ಹಿ (ಗದಗ ಜಿಲ್ಲೆ) | ರೇಷ್ಮೆ ಬೇಸಾಯದಲ್ಲಿ ಪ್ರಾಮುಖ್ಯತೆ ಪಡೆದಿರುವ ರೇಷ್ಮೆ ಮರ ಬೇಸಾಯಕ್ಕೆ ಸಹಾಯಧನ ಪಡೆಯುವ ಕುರಿತು ಕ್ರಮವಹಿಸುವಂತೆ ಕೋರಿದರು. |
| 16. | ಶ್ರೀ ಪರಸಪ್ಪ ನಿಂಗಪ್ಪ ಹುನ್ನಾರ (ಬಾಗಲಕೋಟೆ ಜಿಲ್ಲೆ) | ಅಚ್ಚುಕಟ್ಟು ಪ್ರದೇಶದಲ್ಲಿ ಕೃಷಿ ಹೊಂಡ ನಿರ್ವಹಣೆ, ಬಯೋಡೈಜಸ ರ್‌ಗೆ ಸಹಾಯಧನ, ಎರೆಹುಳು ತೊಟ್ಟಿಗಳ ನಿರ್ಮಾಣವನ್ನು ಹೆಚ್ಚು ಪ್ರದೇಶಕ್ಕೆ ವಿಸ್ತರಿಸುವುದು ಇತ್ಯಾದಿ ತಿಳಿಸುತ್ತಾ ಶೂನ್ಯ ಬಂಡವಾಳ/ನೈಸರ್ಗಿಕ ಕೃಷಿಗಾಗಿ ಆಯ್ಕೆ ಮಾಡಿರುವ ಗ್ರಾಮಗಳನ್ನು ಸರದಿ ಪ್ರಕಾರ ಬದಲಾವಣೆ ಮಾಡುವಂತೆ ಕೋರಿದರು. |
| 17. | ಶ್ರೀ ದೊಡ್ಡಯ್ಯ (ತುಮಕೂರು ಜಿಲ್ಲೆ) | ಕೃಷಿ ಹೊಂಡಕ್ಕೆ ಹೊಂದಿಕೊಂಡಂತೆ ಬಯೋಡೈಜಸ್ಟರ್ ಮೂಲಕ ಜೀವಾಮೃತ ತೊಟ್ಟಿಗಳನ್ನು ಸಂಯೋಜಿಸಿದರೆ ನೀರು ಹಾಯಿಸುವುದಕ್ಕೆ ಸೂಕ್ತವೆಂದು ತಿಳಿಸಿದರು. ಎರೆಗೊಬ್ಬರ ನಿರ್ವಹಣೆಯಲ್ಲಿ ದೊಡ್ಡಗಾತ್ರದ ತೊಟ್ಟಿಗಳ ಅಗತ್ಯತೆಯನ್ನು ತಿಳಿಸಿದರು. ಕೃಷಿ ಹೊಂಡದಲ್ಲಿ ಮೀನುಗಾರಿಕೆಯಿಂದ ಸ್ವಲ್ಪಮಟ್ಟದ ಆದಾಯ ಬಂದಿರುವುದಾಗಿ ತಿಳಿಸಿದರು. |
| 18. | ಶ್ರೀ ಎಂ.ಟಿ.ಓಬಣ್ಣ (ಚಿತ್ರದುರ್ಗ ಜಿಲ್ಲೆ) | ಸ್ವಲ್ಪ ಪ್ರಮಾಣದ ನೀರಿನಿಂದ ಕೇವಲ 3ಕೆ.ಜಿ ಈರುಳ್ಳಿ ಬೀಜದಿಂದ 125 ಚೀಲ ಈರುಳ್ಳಿ ಬೆಳೆಯಿಂದ ಮೂರು ಲಕ್ಷ ಲಾಭ ಬಂದಿರುವುದರಿಂದ ನೀರಿನ ಮಹತ್ವವನ್ನು ತಿಳಿಸಿದರು. |
| 19. | ಶ್ರೀ ಚನ್ನಪ್ಪ ಬಾಳಿಕಾಯಿ (ಹಾವೇರಿ ಜಿಲ್ಲೆ) | ವಿದ್ಯುತ್ ಅಭಾವ ನೀಗಿಸುವಲ್ಲಿ – ಹನಿ ನೀರಾವರಿಯಲ್ಲಿನ ಪೈಪ್‌ಗಳ ಗುಣಮಟ್ಟವು ಎರಡು ವರ್ಷಕ್ಕೆ ಮಾತ್ರ ಬರುತ್ತಿರುವುದರಿಂದ ಈ ಬಗ್ಗೆ ಹೆಚ್ಚು ಬಾಳಿಕೆಯಿರುವ ಪೈಪ್‌ಗಳನ್ನು ವಿತರಿಸುವಂತೆ ಕೋರಿದರು. |
| 20. | ಶ್ರೀಮತಿ ಗೀತಾ.ಕೆ (ದಕ್ಷಿಣ ಕನ್ನಡ ಜಿಲ್ಲೆ) | ಸ್ವಯಂ ಉದ್ಯೋಗ ಪಡೆಯುವಲ್ಲಿ ತರಬೇತಿಗಳ ಸೌಲಭ್ಯದ ಅಗತ್ಯತೆ, ಸಸ್ಯಾಭಿವೃದ್ಧಿ ಕುರಿತು ತರಬೇತಿ, ಎರೆಹುಳು ಹಾಗೂ ಕೃಷಿ ಉಪಕರಣಗಳಿಗೆ ಹೆಚ್ಚು ಸಹಾಯಧನವನ್ನು ನೀಡುವಂತೆ ಕೋರಿದರು. |
| 21. | ಶ್ರೀಮತಿ ಮಹಾದೇವಿ ಗೋಕಾಕ (ವಿಜಯಾಪುರ ಜಿಲ್ಲೆ) | ಸಿರಿಧಾನ್ಯಗಳಿಗೆ ಹೆಚ್ಚಿನ ಪ್ರೇತ್ಸಾಹ ನೀಡುತ್ತಿರುವ ಹಿನ್ನಲೆಯಲ್ಲಿ ಮಾರುಕಟ್ಟೆ ಸೀಮಿತವಾಗಿ ಎಫ್.ಪಿ.ಓ ಗಳ ರಚನೆಗೆ ಕ್ರಮವಹಿಸುವಂತೆ ಕೋರಿದರು. ಆತ್ಮ ಕಾರ್ಯಕ್ರಮಗಳು ಕೃಷಿ ವಿಸ್ತರಣೆಯಲ್ಲಿ ಮುಖ್ಯವಾಗಿ ಆಹಾರ ಭದ್ರತಾ ಗುಂಪುಗಳು, ಸ್ವಸಹಾಯ ಗುಂಪುಗಳು ಹೆಚ್ಚಿನ ಪಾತ್ರವಹಿಸುತ್ತಿರುವುದಾಗಿ ತಿಳಿಸಿದರು. |
| 22. | ಶ್ರೀ ವೀರಣ್ಣ ಯ ಕಳಸಣ್ಣವರ (ಬೆಳಗಾವಿ ಜಿಲ್ಲೆ) | ನೀರು ಸಂರಕ್ಷಣೆಯ ಮಹತ್ವವನ್ನು ವಿವರಿಸುತ್ತಾ ಸೊಪ್ಪು ತರಕಾರಿಗಳನ್ನು 30 ರಿಂದ 35ದಿನಗಳಲ್ಲಿ ಬೆಳೆ ತೆಗೆಯಬಹುದಾಗಿದ್ದು ಹೆಚ್ಚಿನ ವರಮಾನ ಪಡೆಯುವುದಕ್ಕೆ ಸಹಕಾರಿ ಎಂದು ತಿಳಿಸುತ್ತಾ, ಕವಲಿಗಳನ್ನು ಜಮೀನಿನಲ್ಲಿಯೇ ಕಳೆಸುವಂತೆ ಕ್ರಮವಹಿಸಲು ತಿಳಿಸಿದರು. |